ನಿಯಮ 334ರ ಮೇರೆಗೆ

(1) ಮೈಸೂರು ನಗರದಲ್ಲಿ ಪಡಿತರ ತಾಳಿಎಣ್ಣೆ ವಿತರಿಸುವುದು.

ಶ್ರೀ ಕೆ. ಹರ್ಷಕುಮಾರೆಗೌಡ : (ಚಾಮರಾಜ) : ಮಾನ್ಯ ಅಧ್ಯಕ್ಷಣೆಯವರೇ, ಮೈಸೂರು ನಗರದ ಪಡಿತರದಾರರಿಗೆ ಪ್ರಸಕ್ತ ಕಾರ್ಡ್ ಒಂದಕ್ಕೆ ಕೇವಲ ಅರ್ಧ ಕೆ.ಜಿ.ತಾಳೆ ಎಣ್ಣೆ ವಿತರಿಸಲಾಗುತ್ತಿದ್ದು, ಬಳಕೆದಾರರು ಅನಿವಾರ್ಯವಾಗಿ ಕಾಳಸಂತೆಯಲ್ಲಿ ಅಡಿಗೆ ಎಣ್ಣೆ ಖರೀದಿಸುವ ಅನಿವಾರ್ಯ ಪರಿಸ್ಥಿತಿಗೆ ದೂಡಲ್ಪಟ್ಟಿದ್ದಾರೆ. ಆದರೆ ಬೆಂಗಳೂರಿನ ಬಳಕೆದಾರರಿಗೆ ಕಾರ್ಡ್ ಒಂದಕ್ಕೆ ಒಂದು ಕೆ.ಜಿ. ಅಡಿಗೆ ಎಣ್ಣೆ ವಿತರಣೆ ಮಾಡುವ ಮೂಲಕ ಆಹಾರ ಇಲಾಖೆಯ ತಾರತಮ್ಯ ನೀತಿಯಿಂದ ಮೈಸೂರಿಗೆ ಅರ್ಧ ಕೆ.ಜಿ.ಎಣ್ಣೆ ಬೆಂಗಳೂರಿಗೆ ಒಂದು ಕೆ.ಜಿ.ಎಣ್ಣೆ ವಿತರಣೆ ಮಾಡುವುದು ಯಾವ ನ್ಯಾಯ. ಆದ್ದರಿಂದ ಸರ್ಕಾರ ಮೊದಲು ಈ ದ್ವಿಮುಖ ನೀತಿಯನ್ನು ತಪ್ಪಿಸುವ ಮೂಲಕ ತಾಳಿ ಎಣ್ಣೆಯನ್ನು ಮೊದಲಿನಂತೆ ಮೈಸೂರಿನ ನಾಗರೀಕರಿಗೂ ದೊರಕುವಂತೆ ಮಾಡುವ ಮೂಲಕ ಕಾಳಸಂತೆಯಲ್ಲಿ ಅಡಿಗೆ ಎಣ್ಣೆಯನ್ನು ಖರೀದಿಸುವ ಮೂಲಕ ಶೋಷಣೆಗೊಳಗಾಗುವಂಥ ನಾಗರೀಕರನ್ನು ತುರ್ತಾಗಿ ತಪ್ಪಿಸಬೇಕೆಂದು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಎಂ.ವೀರಪ್ಪ ಮೊಯಿಲಿ : (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, ಈಗ ಮಾನ್ಯ ಸದಸ್ಯರಾದ ಹರ್ಷಕುಮಾರ್‌ಗೌಡರು ಮೈಸೂರು ನಗರದಲ್ಲಿ ಪಡಿತರ ಕಾರ್ಡ್‌ದಾರರಿಗೆ ತಾಳಿಎಣ್ಣೆ ವಿತರಣೆಯ ಬಗ್ಗೆ ಸರ್ಕಾರದ ಗಮನವನ್ನು ಸೆಳೆದಿದ್ದಾರೆ. ಸನ್ಮಾನ್ಯ ಆಹಾರ ಮತ್ತು ನಾಗರಿಕ ಸರಬರಾಜು ಮಂತ್ರಿಗಳು ಈ ಬಗ್ಗೆ ಸೂಕ್ತ ವ್ಯವಸ್ಥೆ ಮಾಡುವಂತೆ ತಿಳಿಸುತ್ತೇನೆ.

(2) ಬೆಂಗಳೂರು-ತುಮಕೂರು ರಸ್ತೆಯಲ್ಲಿರುವ ಎಂ.ಇಡಿ. ಸಂಸ್ಥೆಯನ್ನು ಬಿ.ಹೆಚ್.ಇ.ಎಲ್. ಸಂಸ್ಥೆಗೆ ವಹಿಸುವುದು

ಶ್ರೀ ಕೆ.ಲಕ್ಕಣ್ಣ : (ರಾಜಾಜಿನಗರ) : ಮಾನ್ಯ ಅಧ್ಯಕ್ಷಣೆಯವರೇ, ತುಮಕೂರು ರಸ್ತೆಯಲ್ಲಿರುವ ಮೈಸೂರು ಎಲೆಕ್ಟ್ರಕಲ್ ಇಂಡಸ್ಟ್ರೀಸ್ (ಎಂ.ಇ.ಡಿ) ಸಂಸ್ಥೆಯು ಕಳೆದ 10 ವರ್ಷಗಳಿಂದಲೂ ನಷ್ಟ ಹೊಂದುತ್ತಿರುವುದಕ್ಕೆ ಕಾರಣ ಇಲ್ಲಿ ಉತ್ಪಾದನೆ ಸರಿಯಾದ ರೀತಿಯಲ್ಲಿ ಆಗದೆ ಇರುವುದು ಮತ್ತು ಆದಂಥ ಉತ್ಪಾದನಾ ವಸ್ತುಗಳೂ ಕೂಡ ಮಾರುಕಟ್ಟೆಯಲ್ಲಿ ಮಾರಾಟವಾಗಿದಿರುವುದು. ಈ ಕಾರಣದಿಂದ ಸದರಿ ಕಾರ್ಖಾನೆಯನ್ನು ಖಾಸಗಿಯವರಿಗೆ ಮಾರಾಟ ಮಾಡಲು ಸರ್ಕಾರದವರು ಮಾತುಕತೆ ನಡೆಸುತ್ತಿರುವುದಾಗಿ ತಿಳಿದುಬಂದಿದ್ದು ಅಲ್ಲಿ ಕೆಲಸ ಮಾಡುತ್ತಿರುವ ಕಾರ್ಮಿಕವರ್ಗದವರು ತುಂಬಾ ಕಳವಳಕ್ಕೊಳಗಾಗಿದ್ದಾರೆ. ಒಂದು ವೇಳೆ ಇದನ್ನು ಮಾರಾಟ ಮಾಡುವುದು ನಿಜವೇ ಆಗಿದ್ದಲ್ಲಿ, ಕೇಂದ್ರ ಸರ್ಕಾರಕ್ಕೆ ವಹಿಸುವುದು ಸೂಕ್ತ. ಕಾರಣ ಈ ಹಿಂದೆ ನಷ್ಟದಲ್ಲಿದ್ದ ಫೋರ್ಸಿಲಿನ್ ಫ್ಯಾಕ್ಟರಿಯನ್ನು ಕೇಂದ್ರ ಸರ್ಕಾರದ ಅಧೀನದಲ್ಲಿರತಕ್ಕ ಬಿ.ಹೆಚ್.ಇ.ಎಲ್.ನವರು ತೆಗೆದುಕೊಂಡು ಈಗ ಉತ್ತಮ ಸ್ಥಿತಿಯಲ್ಲಿ ನಡೆಸುತ್ತಿದ್ದಾರೆ. ಆದ್ದರಿಂದ ಈ ಸದರಿ ಎಂ.ಇ.ಐ. ಸಂಸ್ಥೆಯನ್ನು ಬಿ.ಹೆಚ್.ಇ.ಎಲ್ ಸಂಸ್ಥೆಯವರಿಗೆ ವಹಿಸಿಕೊಟ್ಟರೆ ಕಾರ್ಖಾನೆ ಉತ್ತಮಗೊಳ್ಳುವುದರ ಜೊತೆಗೆ ಇಲ್ಲಿನ ಕಾರ್ಮಿಕ ವರ್ಗದ ಕುಟುಂಬಗಳಿಗೆ ಮುಂದೆ ಒದಗಬಹುದಾದ ತೊಂದರೆಯನ್ನು ತಪ್ಪಿಸಿದಂತಾಗುತ್ತದೆ. ಈ ಬಗ್ಗೆ ಸರ್ಕಾರದ ಖಚಿತ ಅಭಿಪ್ರಾಯ ಏನೆಂಬುದನ್ನು ತಿಳಿಸಬೇಕೆಂದು ಮಾನ್ಯ ಮುಖ್ಯಮಂತ್ರಿಗಳನ್ನು ಒತ್ತಾಯಪೂರ್ವಕವಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಮುಖ್ಯಮುಂತ್ರಿಗಳ ಪರವಾಗಿ ಈ ಹೇಳಿಕೆಯನ್ನು ಕೊಡಲಿಕ್ಕೆ ತಮ್ಮ ಅನುಮತಿಯನ್ನು ಕೋರುತ್ತಿದ್ದೇನೆ.

ಎಂ.ಇ.ಐ ಕಾರ್ಖಾನೆಯು ರಾಜ್ಯ ಸರ್ಕಾರದ ಉದ್ದಿಮೆಯಾಗಿದ್ದು, ಇದರಲ್ಲಿ ರಾಜ್ಯ ಸರ್ಕಾರವು ಶೇ.52.23 ರಷ್ಟು ಶೇರುಗಳನ್ನು ಹೊಂದಿದ್ದು ಉಳಿದ ಶೇಕಡ 47.77 ರಷ್ಟು ಷೇರನ್ನು ಎಲ್.ಐ.ಸಿ.ಯು.ಟಿ.ಐ ಮುಂತಾದ ಸಂಸ್ಥೆಗಳು ಹೊಂದಿವೆ.

ಈ ಕಂಪನಿಯು ಕೆಲವು ವರ್ಷಗಳಿಂದಲೂ ನಷ್ಟವನ್ನು ಅನುಭವಿಸುತ್ತಿರುವುದರಿಂದ ಈ ಕಂಪನಿಯ ಪುನಃಸಜ್ಜೀಕರಣ ಆದುನೀಕರಣಗೊಳಿಸುವ ಸಂಬಂಧವಾಗಿ ಪರಿಷ್ಕರಿಸಲ್ಪಟ್ಟ ಪ್ರಸ್ತಾವನೆಯನ್ನು ಮುಂಬಯಿಯಲ್ಲಿರುವ ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್ ಆಫ್ ಇಂಡಿಯಾ ಇವರಿಗೆ ಕಂಪನಿಯ ಪತ್ರದ ಉಲ್ಲೇಖ ಎಫ್ಎ 88 ಐಡಿಬಿಐ ದಿನಾಂಕ : 1-12-88 ರಲ್ಲಿ ಹಾಜರು ಪಡಿಸಿದೆ. ಕಂಪನಿಯು ಯಥಾಸ್ಥಿತಿಯಲ್ಲಿ ಕೂಡ ಬಂದ ನಷ್ಟ ಮತ್ತು ಸಾಲಗಳು ಜಾಸ್ತಿಯಿರುವುದರಿಂದ ಮತ್ತೆ ಕಂಪನಿಯ ಪುನಃ ಸಜ್ಜೀಕರಣ ಆಧುನೀಕರಣಕ್ಕೆ ನೀಡುವ ಸಾಲದ ಬಡ್ಡಿಯ ಹೊಣೆಗಳನ್ನು ಕಂಪನಿಯು ಹೊರಲು ಸಾಧ್ಯವಾಗದೇ ಇರುವುದರಿಂದ ಕೈಗಾರಿಕಾ ಅಭಿವೃದ್ಧಿ ಬ್ಯಾಂಕ್‌ನವರು ಮತ್ತೆ ಮುಂಗಡವಾಗಿ ಹಣ ನೀಡುವ ಬಗ್ಗೆ ತನ್ನ ಒಪ್ಪಿಗೆಯನ್ನು ನಿರಾಕರಿಸಿದೆ. ಈ ಸಂಸ್ಥೆಯವರು ಈ ಕಂಪನಿಯನ್ನು ಸಾದ್ಯವಾದಷ್ಟು ಮಟ್ಟಿಗೆ ಯಾವುದಾದರೂ ಇತರೆ ಕಂಪನಿಗೆ ವಿಲೀನ ಮಾಡುವ ಬಗ್ಗೆ ಪರಿಶೀಲಿಸುವುದು ಉತ್ತಮವೆಂದು ಸಲಹೆ ಮಾಡಿರುತ್ತಾರೆ. ಮುಂದುವರೆದು ರಾಜ್ಯ ಸರ್ಕಾರವು ಈ ಕಂಪನಿಗೆ ಬಡ್ಡಿಯಿಲ್ಲದೆ ಅವಶ್ಯಕ ಬಂಡವಾಳವನ್ನು ಹೂಡಲು ಕೇಳಿಕೊಳ್ಳಬೇಕೆಂದೂ ಸಹ ಐ.ಡಿ.ಬಿ.ಐ ಸಂಸ್ಥೆಯವರು ಸಲಹೆ ಮಾಡಿರುತ್ತಾರೆ.

ಈ ಕಂಪನಿಯನ್ನು ಇತರೆ ಯಾವುದೇ ಸಾರ್ವಜನಿಕ ಉದ್ಯಮಗಳಾದ ಎನ್.ಜಿ.ಇ.ಎಫ್, ಬಿ.ಇ.ಎಲ್ ಮತ್ತು ಬಿ.ಹೆಚ್.ಇ.ಎಲ್ ಹಾಗೂ ಇತರೆ ಕಂಪನಿಯವರು ತೆಗೆದುಕೊಳ್ಳಲು ಇಷ್ಟಪಡುವರೇ ಎಂದು ತಿಳಿಯಲು ಪ್ರಯತ್ನಿಸಲಾಗಿದೆ. ಆದರೆ ಈ ದಿನದವರೆವಿಗೂ ಯಾವುದೇ ಕಂಪನಿಯಿಂದ ಅನುಕೂಲಕರವಾದ ಉತ್ತರ ಬಂದಿರುವುದಿಲ್ಲ.

ಈ ಕಂಪನಿಯನ್ನು "ರಿಲೀಪ್ ಅಂಡರ್ ಟೇಕಿಂಗ್ " ಎಂಬುದಾಗಿ ಪರಿಗಣಿಸಿದ್ದ ಅವಧಿಯು ದಿನಾಂಕ 4-1-91ಕ್ಕೆ ಮುಗಿದಿರುತ್ತದೆ ಮತ್ತು ಸರ್ಕಾರವು ಇದನ್ನು ಮತ್ತೆ ಮುಂದುವರಿಸಿರುವುದಿಲ್ಲ.

ಬೆಸ್ಟ್ ಅಂಡ್ ಕ್ರಾಂಪ್ಟನ್ ಕಂಪನಿ ಮುಂತಾದ ಕೆಲವು ಖಾಸಗಿ ಕಂಪನಿಗಳು ಈ ಕಂಪನಿಯನ್ನು ತೆಗೆದುಕೊಳ್ಳಲು ತಮ್ಮ ಆಸಕ್ತಿಯನ್ನು ತೋರಿಸಿ ಕಂಪನಿಯ ಸ್ಥಿತಿಗತಿಯ ಬಗ್ಗೆ ಅಧ್ಯಯನ ನಡೆಸಲು ಕೇಳಿಕೊಂಡು ಕಂಪನಿಯ ಆಸ್ತಿಯ ಪ್ರಾಕೃತಿಕ ಸ್ಥಿತಿಯನ್ನು ಪರಿಶೀಲಿಸುತ್ತಿವೆ. ಈ ಕಂಪನಿಯನ್ನು ತೆಗೆದುಕೊಳ್ಳುವ ಬಗ್ಗೆ ಒಡಂಬಡಿಕೆ ಮಾಡಿಕೊಂಡಿರುವುದಿಲ್ಲ.

ಓಕಳೀಪುರದಲ್ಲಿರುವ ಕಂಪನಿಗೆ ಸೇರಿದ ಸುಮಾರು ಐದು ಎಕರೆ ಭೂಮಿಯನ್ನು ಮಾರಾಟ ಮಾಡಿ ಆ ಹಣವನ್ನು ಕಂಪನಿಯ ಅಭಿವೃದ್ಧಿಗೆ ಉಪಯೋಗಿಸುವ ಸಲಹೆ ಇದೆ. ಪ್ರಸ್ತುತ ಎಂ.ಇ.ಐ. ಕಂಪನಿಯ ಅಧ್ಯಕ್ಷರು ಮತ್ತು ಆಡಳಿತ ನಿರ್ದೇಶಕರು ತಮ್ಮ ಶಕ್ತಿ ಮೀರಿ ಪ್ರಯತ್ನಿಸಿ ಓಕಳೀಪುರದಲ್ಲಿರುವ ಭೂಮಿಯಿಂದ ಕಡೆಯ ಪಕ್ಷ 10.00ಕೋಟಿ ರೂಪಾಯಿ ಪಡೆಯುವ ಬಗ್ಗೆ ಸರ್ಕಾರದ ಜೊತೆ ವ್ಯವಹರಿಸಿರುವರು. ಈ ಪ್ರಸ್ತಾವನೆ ಸರ್ಕಾರದ ಪರಿಶೀಲನೆಯಲ್ಲಿದೆ.

(3) ಬೆಂಗಳೂರು ನಗರದಲ್ಲಿ ರಸ್ತೆ ಉಬ್ಬುಗಳಿಗೆ ಬಣ್ಣ ಬಳಿಯುವುದು ಮತ್ತು ಎಚ್ಚರಿಕೆ ಬೋರ್ಡುಗಳನ್ನು ಹಾಕುವುದು.

ಶ್ರೀ ಪೆರಿಕಲ್ ಎಂ. ಮಲ್ಲಪ್ಪ (ಚಿಕ್ಕಪೇಟೆ) : ಬೆಂಗಳೂರು ನಗರದಲ್ಲಿ ವಾಹನಗಳ ವೇಗವನ್ನು ಕಡಿಮೆ ಮಾಡುವ ಸಲುವಾಗಿ ಬೆಂಗಳೂರು ನಗರ ಸಂಚಾರಿ ಪೋಲೀಸರು ಎಲ್ಲಾ ಕಡೆಗಳಲ್ಲೂ ರಸ್ತೆ ಉಬ್ಬುಗಳನ್ನು ನಿರ್ಮಿಸಿರುತ್ತಾರೆ. ಆದರೆ